# GOVERNMENT OF KARNATAKA

ನಿರ್ದೇಶಕರ ಕಛೇರಿ,
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು
ಪದನಿಮಿತ್ತ ರಾಜ್ಯ ಕೃಷಿ ಗಣತಿ ಆಯುಕ್ತರು,
ಕರ್ನಾಟಕ ರಾಜ್ಯ.

Office of the Director,
Directorate of Economics & Statistics
Ex-Officio State Agriculture Census
Commissiooner,
Karnataka State.

ದೂರವಾಣಿ 22253758
FAX : 22353826
E-mail des_dir@mail.kar.nic.in
Website : http://des,kar.nic.in
ಬಹುಮಹಡಿ ಕಟ್ಟಡ, ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು- 560 001.
*M.S. BUILDING,DR. B.R. AMBEDKAR VEEDHI,*
*BANGALORE-560 001.*

ಸಂಖ್ಯೆ:ಆಸಾನಿ 44 ಜಮನೋ 2016 ದಿನಾಂಕ: 10.02.2017

## ಸುತ್ತೋಲೆ

ಜನನ-ಮರಣ ನೋಂದಣಿ ಅಧಿನಿಯಮ, 1969 ಮತ್ತು ಕರ್ನಾಟಕ ಜನನ ಮರಣ ನೋಂದಣಿ ನಿಯಮಗಳು, 1999 ರನ್ವಯ ಘಟಿಸುವ ಎಲ್ಲಾ ಜನನ/ ಮರಣಗಳ ನೋಂದಣಿ ಕಡ್ಡಾಯವಾಗಿರುತ್ತದೆ. ನೋಂದಣಿ ಪ್ರಕಾರ್ಯಗಳನ್ನು ತ್ವರಿತವಾಗಿ/ಸರಳವಾಗಿ ನಿರ್ವಹಿಸಲು ಮತ್ತು ನಾಗರೀಕ ನೋಂದಣಿಗೆ ಸಂಬಂಧಿಸಿದ ಸೇವೆಗಳು ಕಡಿಮೆ ಅವಧಿಯಲ್ಲಿ ಸುಲಭವಾಗಿ ಮತ್ತು ಅತ್ಯಂತ ಕಡಿಮೆ ವೆಚ್ಚದಲ್ಲಿ ನಿಗಧಿತ ಸಮಯಕ್ಕೆ ನಾಗರೀಕರಿಗೆ ದೊರೆಯುವಂತೆ ನಿಯಮಗಳನ್ನು ರೂಪಿಸಿ ಹೊರಡಿಸಲಾಗಿರುತ್ತದೆ. ಜನನ/ಮರಣ ನೋಂದಣಿ ದಾಖಲೆಗಳಲ್ಲಿ ಆಗುವ ತಪ್ಪುಗಳ ತಿದ್ದುಪಡಿ/ಬದಲಾವಣೆ ಕುರಿತು ಸಂಧರ್ಬಾನುಸಾರ ಆಗಿಂದಾಗಲೇ ನಿಯಮಗಳಿಗೆ ಸ್ಪಷ್ಟೀಕರಣಗಳನ್ನು ಸಹ ಹೊರಡಿಸಲಾಗಿರುತ್ತದೆ.

ಆದರೂ ಸಹ ಜನನ/ಮರಣ ದಾಖಲೆಗಳಲ್ಲಾಗುವ ತಪ್ಪುಗಳ ತಿದ್ದುಪಡಿ/ಬದಲಾವಣೆಗೆ ನ್ಯಾಯಾಲಯದ ಆದೇಶ ತರುವಂತೆ ಸಾರ್ವಜನಿಕರನ್ನು ಒತ್ತಾಯಿಸುತ್ತಿರುವುದಾಗಿಯೂ ಮತ್ತು ನಿಯಮಗಳಲ್ಲಿ ನಿಗಧಿ ಪಡಿಸಲಾದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕಗಳನ್ನು ಪಡೆಯುತ್ತಿರುವುದಾಗಿಯೂ ಸಾರ್ವಜನಿಕರಿಂದ ದೂರುಗಳು ಬರುತ್ತಿರುತ್ತವೆ.

ಈ ಹಿನ್ನಲೆಯಲ್ಲಿ ಜನನ/ಮರಣ ದಾಖಲೆಗಳಲ್ಲಾಗುವ ತಪ್ಪುಗಳ ತಿದ್ದುಪಡಿ/ಬದಲಾವಣೆಗಳಿಗೆ ನಿಯಮಗಳಲ್ಲಿ ನಿಗಧಿ ಪಡಿಸಿರುವ ಶುಲ್ಕವನ್ನು ಮಾತ್ರ ಪಡೆದು ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಿದೆ.

**ಜನನ-ಮರಣ ನೋಂದಣಿ ಅಧಿನಿಯಮ, 1969 ರ ಪ್ರಕರಣ 15 ಮತ್ತು ಕರ್ನಾಟಕ ಜನನ ಮರಣ ನೋಂದಣಿ ನಿಯಮಗಳು, 1999 ರ ನಿಯಮ 11 ರನ್ವಯ ಜನನ / ಮರಣ ನೋಂದಣಿಯಲ್ಲಿನ ತಪ್ಪುಗಳನ್ನು ತಿದ್ದುಪಡಿ ಮಾಡುವ ಬಗ್ಗೆ.**

ದಾಖಲೆಗಳಲ್ಲಿ ಬರವಣಿಗೆಯ ಅಥವಾ ಔಪಚಾರಿಕ ತಪ್ಪನ್ನು ಮಾಡಲಾಗಿದೆ ಎಂದಾಗಲಿ, ಮಾಹಿತಿದಾರರು ಸರಿಯಾದ ಮಾಹಿತಿ ನೀಡದೆ / ಆಸ್ಪತ್ರೆಯವರ ಉದಾಸೀನತೆಯಿಂದ ನೋಂದಣಿಯಲ್ಲಿ ತಪ್ಪಾಗುವ ಅವಕಾಶ ಇರುವುದರಿಂದ, ಅರ್ಜಿದಾರರು ಒದಗಿಸುವ ಪೂರಕ ದಾಖಲೆಗಳನ್ನು ನೋಂದಣಾಧಿಕಾರಿಗಳು ಪ್ರಮಾಣೀಕರಿಸಿಕೊಂಡು, ದಾಖಲೆಗಳು ತೃಪ್ತಿದಾಯಕವಾಗಿರುವುದು ರುಜುವಾತು ಆದಲ್ಲಿ, ಪ್ರಸ್ತುತ ದಾಖಲಿಸಿರುವ ಹೆಸರಿನ ಜೊತೆಗೆ ಅಲಿಯಾಸ್ ಉಪಯೋಗಿಸಿ ಪ್ರಸ್ತಾಪಿತ ಹೆಸರನ್ನು ಸೇರಿಸಬಹುದು. ಅಲಿಯಾಸ್ ಎಂದು ಸೇರಿಸುವುದನ್ನು ಅರ್ಜದಾರರು ಒಪ್ಪದಿದ್ದಲ್ಲಿ, ಬದಲಾವಣೆ ಹೆಸರನ್ನು ನಮೂದಿಸಿ ಕೊಡಬಹುದಾಗಿದೆ.

ಜನನ ಮರಣ ದಿನಾಂಕಗಳನ್ನು ವಂಚನೆ / ಮೋಸದಿಂದ ಮಾಹಿತಿ ನೀಡಿ ನೋಂದಣಿಯಾಗಿದೆ ಎಂದು ನೋಂದಣಾಧಿಕಾರಿಗೆ ತೃಪ್ತಿದಾಯಕವಾಗಿ ರುಜುವಾತಾದಲ್ಲಿ ಮಾತ್ರ ತಿದ್ದುಪಡಿ ಮಾಡಬಹುದು. (ಜನನ ಮರಣಗಳ ದಿನಾಂಕ ತಿದ್ದುಪಡಿಗೆ ಮತ್ತು ಲಿಂಗ ಬದಲಾವಣೆಗೆ ಸಂದರ್ಭಾನುಸಾರ ವೈದ್ಯಾಧಿಕಾರಿಗಳ ದೃಢೀಕರಣ ಪಡೆಯುವುದು)

**ಗಮನಕ್ಕೆ**: ಹೆಸರು ಮತ್ತು ಜನನ / ಮರಣ ದಿನಾಂಕಗಳ ತಿದ್ದುಪಡಿ/ ಕ್ರಮವನ್ನು ಪ್ರೋತ್ಸಾಹಿಸಬಾರದೆಂದು ಹಾಗೂ ಕೊನೆ ಪರಿಹಾರವಾಗಿ (Last resort) ತಿದ್ದುಪಡಿಯನ್ನು ಪರಿಗಣಿಸಬೇಕೆಂದು ಸೂಚಿಸಲಾಗಿರುತ್ತದೆ.

(ಭಾರತದ ಮಹಾ ನೋಂದಣಾಧಿಕಾರಿಗಳ ಪತ್ರದ ಸಂಖ್ಯೆ. 1/12/2014-VS (CRS) ದಿನಾಂಕ 30.6.2015)

**ಜನನ ಮರಣ ನೋಂದಣಿ ನಿಯಮಗಳು, 1999 ರ ನಿಯಮ 10 ರನ್ವಯ**

**(ಎ) ದಿ**ನಾಂಕ: 31.12.1999 ಕ್ಕಿಂತ ಹಿಂದೆ ನೋಂದಣಿಯಾದ ಜನನ ಪ್ರಕರಣಗಳಿಗೆ ಸಂಬಂಧಿಸಿದಂತೆ, ಹೆಸರು ಸೇರಿಸಲು 15 ವರ್ಷದ ಅವಧಿ, ಅಂದರೆ ದಿನಾಂಕ: 31.12.2014 ವರೆಗೆ ಇತ್ತು. ತದನಂತರ ಮತ್ತೆ 5 ವರ್ಷಗಳ ಅವಧಿ ಅಂದರೆ ದಿನಾಂಕ: 31.12.2019 ರವರೆಗೆ ವಿಸ್ತರಿಸಲಾಗಿರುತ್ತದೆ.

**(ಬಿ)** ದಿನಾಂಕ: 01.01.2000 ರಿಂದೀಚೆಗೆ ನೋಂದಣಿಯಾಗುವ ಜನನ ಪ್ರಕರಣಗಳಿಗೆ ಸಂಬಂಧಿಸಿದಂತೆ 15 ವರ್ಷಗಳ ಅವಧಿಯೊಳಗಾಗಿ ಹೆಸರು ಸೇರ್ಪಡೆಗೆ ಅವಕಾಶ ಇರುತ್ತದೆ.

(ಸರ್ಕಾರದ ಅಧಿಸೂಚನೆ ಸಂಖ್ಯೆ. ಪಿಡಿ 244 ಎಸ್‌ಎಂಸಿ 2014 ದಿನಾಂಕ: 09.10.2014)

ಜನನ / ಮರಣ ದಾಖಲೆಗಳಲ್ಲಾಗುವ ತಪ್ಪುಗಳ ತಿದ್ದುಪಡಿ / ಬದಲಾವಣೆಗೆ ಮೇಲೆ ವಿವರಿಸಲಾದಂತೆ ಕ್ರಮ ವಹಿಸಲು ಮತ್ತು ನಿಯಮಗಳಲ್ಲಿ ನಿಗಧಿ ಪಡಿಸಲಾಗಿರುವ ಶುಲ್ಕಗಳನ್ನು ಮಾತ್ರ ಸಾರ್ವಜನಿಕರಿಂದ ಪಡೆದು, ರಶೀದಿಗಳನ್ನು ನೀಡಿ, ಪ್ರಮಾಣ ಪತ್ರವನ್ನು ನೀಡಿ ತ್ವರಿತ ಸೇವೆಯನ್ನು ಒದಗಿಸಲು ಕ್ರಮವಹಿಸುವುದು.

ಸಹಿ/-
(ಸಿ.ಹೆಚ್.ವಸುಂಧರಾ ದೇವಿ)
ಜನನ ಮತ್ತು ಮರಣಗಳ ಮುಖ್ಯ
ನೋಂದಣಾಧಿಕಾರಿ,
ಆಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು:

1. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಕೆ ಸೂಕ್ತ ಕ್ರಮಕ್ಕಾಗಿ.
2. ಜನನ, ಮರಣಗಳ ಎಲ್ಲಾ ನೋಂದಣಾಧಿಕಾರಿ/ಉಪನೋಂದಣಾಧಿಕಾರಿಗಳಿಗೆ.
3. ಜಂಟಿ ನಿರ್ದೇಶಕರು (ಸಾಂಖ್ಯಿಕ),ಬೆಂಗಳೂರು ಮಹಾನಗರ ಪಾಲಿಕೆ, 2ನೇ ಮಹಡಿ, ಬಿಬಿಎಂಪಿ ಕಾಂಪ್ಲೆಕ್ಸ್, ಉಪ್ಪಾರ ಪೇಟೆ ಪೋಲಿಸ್ ಸ್ಟೇಷನ್ ಹಿಂಭಾಗ, ಸುಭಾಷ್ ನಗರ, ಬೆಂಗಳೂರು-560009.
4. ಜಂಟಿ ನಿರ್ದೇಶಕರು, ಪೌರ ಸುಧಾರಣಾ ಕೋಶ, ಪೌರಾಡಳಿತ ನಿರ್ದೇಶನಾಲಯ, #1-4, 6ನೇ ಮಹಡಿ, ಸಿ.ಟಿ. ಪಾರ್ಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ರಾಜಾಜಿನಗರ, ಬೆಂಗಳೂರು-560010.